CENTRAL BOARD OF SECONDARY EDUCATION

MARKING SCHEME -2024

SUBJECT: KANNADA

SUBJECT CODE - 015

CLASS - X

ಮುಖ್ಯ ಪ್ರಶ್ನೆ ಸಂಖ್ಯೆ	**ಉಪ ಪ್ರಶ್ನೆ ಸಂಖ್ಯೆ**	**ಸರಿ ಆಯ್ಕೆ ಮತ್ತು ಸರಿ ಉತ್ತರಗಳು**	**ವಿಭಜಿತ ಅಂಕಗಳು**	**ಒಟ್ಟು ಅಂಕಗಳು**
ಗದ್ಯಾಂಶ-1				
1.	I	(c) ಸಹನೆ - ಸಹಾನುಭೂತಿ	1	1
	II	(d) 1, 2 ಮತ್ತು 4	1	1
	III	(a) ಸಮಸ್ಯೆಗಳನ್ನು ಸೃಷ್ಟಿಸಬಲ್ಲದು	1	1
	IV	(b) ತ್ರಿಕರಣ ಸಾಂಗತ್ಯ	1	1
	V	(d) ಹೃದಯವನ್ನು	1	1
ಗದ್ಯಾಂಶ-2				
2	I	(c) ವಾಸ್ತುಶಿಲ್ಪಿ	1	1
	II	(d) ಗಾಳಿ, ಬೆಳಕು, ಮಳೆನೀರು	1	1
	III	(b) 4, 2 ಮತ್ತು 3	1	1
	IV	(a) ಪರಿಸರದೊಂದಿಗೆ	1	1
	V	(d) ಮಾರುಕಟ್ಟೆಯದಾದರೆ - ಅಗತ್ಯಗಳನ್ನು	1	1
ಪರಿಚಿತ ಗದ್ಯಭಾಗ -ಶುಕನಾಸನ ಉಪದೇಶ				
3	I	ಹಿತವಚನವು ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಬಗೆಯ ಕೊಳೆಯನ್ನೆಲ್ಲ ತೊಳೆದುಬಿಡುತ್ತದೆ.	1	1
	II	ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. **ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ.** ಎಂಥ **ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ.** ಯಾರದೋ ದಾಕ್ಷಿಣ್ಯಕ್ಕೆಉಪದೇಶವನ್ನು ಆಲಿಸಿದರೂ ಎಂಥ ಅನಾದರ ಆ ಮೋರೆಯಲ್ಲಿ! ಆನೆಯಂತೆ ಅರೆ	1	1

		ಮುಚ್ಚಿದ ಕಣ್ಣಲ್ಲಿ **“ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ”** ಎನ್ನುವ ವಿಚಾರ ಮೂಡುತ್ತದೆ. **ಸೂಚನೆ :- ಈ ಮೇಲಿನ ಯಾವುದೇ ಒಂದು ಅಂಶವನ್ನು ಬರೆದರೂ ಪೂರ್ಣಾಂಕ ನೀಡಬೇಕು**		
	III	ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ.	1	1
	IV	ಲಕ್ಷ್ಮೀ **ಚಂದ್ರಕಲೆಯ ವಕ್ರತೆ, ಉಚ್ಚೈಃಶ್ರವಸ್ಸಿನ ಚಾಪಲ್ಯ, ಕಾಲಕೂಟದ** ಮೋಹಕತ್ವ, **ಮದ್ಯದ ಮಾದಕತ್ವ, ಕೌಸ್ತುಭದ ಕಾಠಿನ್ಯ** ಈ ಎಲ್ಲ ದುರ್ಗುಣಗಳನ್ನು ಹೊತ್ತು ಬಂದಿದ್ದಾಳೆ. **ಸೂಚನೆ:-ಮಕ್ಕಳು ಮೇಲೆ ತಿಳಿಸಿದ ಯಾವುದೇ ಎರಡು ಅಂಶಗಳನ್ನು ಬರೆದಿದ್ದರೂ ಪೂರ್ಣಾಂಕ ನೀಡಬೇಕು**	1	1
	V	ಗುರುವಚನ **ಸಜ್ಜನರ** ಕಿವಿಗೆ ಆಭರಣ.	1	1
ಪರಿಚಿತ ಪದ್ಯಭಾಗ -ಹಲಗಲಿಬೇಡರು				
4	**I**	ಊರನ್ನು ಲೂಟಿ ಮಾಡಲು ಹೇಳಿದವರು **‘ಕಾರ ಸಾಹೇಬ’**	1	1
	II	ಸಿಡಿಲು ಸಿಡಿದ ಹಾಗೆ **ಗುಂಡು** ಸಿಡಿದವು.	1	1
	III	ಹತ್ತಿಪ್ಪತ್ತು ಕುದುರೆಗಳನ್ನು ಕಡಿದವರು **ಬಾಲ.**	1	1
	IV	ಕೈಗೆ ಸಿಕ್ಕಿದ್ದು ತೆಗೆದುಕೊಂಡು **ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿದ್ದರಿಂದ** ಹಲಗಲಿ ಗುರುತು ಉಳಿಯದಂತಾಯಿತು.	1	1
	V	ಲಾವಣಿಕಾರ ಅಂಕಿತಗೊಳಿಸಿರುವ ದೈವ ಕುರ್ತುಕೋಟಿ **ಕಲ್ಮೇಶ** **ಸೂಚನೆ:-ಕಲ್ಮೇಶ ಎಂದು ಬರೆದರೂ ಪೂರ್ಣಾಂಕ ನೀಡಬೇಕು.**	1	1

SECTION – B ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ				
ಬಹು ಆಯ್ಕೆ ಪ್ರಶ್ನೆಗಳು				
5	**I**	(b) A-3 B-4 C-2 D-1	**1**	**1**
	II	(b) ಕಾವ್ಯ - ಪ್ರಸಾದ	**1**	**1**
	III	(d) 1ಮತ್ತು 4	**1**	**1**
	IV	(a) ಹಣ್ಣುಹಂಪಲ	**1**	**1**
	V	(c) ವರುಣ	**1**	**1**
	VI	(d) ನೋಡು	**1**	**1**
	VII	(a) ಕರಣಾರ್ಥ ಎಂಬುದು ಸರಿ ಉತ್ತರ **ಸೂಚನೆ:-**ಪಠ್ಯಕ್ರಮ ಹೊರತುಪಡಿಸಿದ ಪ್ರಶ್ನೆಯಾಗಿರುವುದರಿಂದ ಯಾವುದೇ ಆಯ್ಕೆ ಬರೆದರೂ **ಕೃಪಾಂಕ** ನೀಡಬೇಕು	**1**	**1**
	VIII	(d) ತಾವು	**1**	**1**
	IX	(c) ನಾಲ್ವರು	**1**	**1**
	X	(a) ಒಳ್ಳೆಯ	**1**	**1**
ಸೂಚನೆಯಂತೆ ಬರೆಯುವುದು				
6	**I**	ನೀವೆಲ್ಲರೂ ಒಂದೇ ಸಾಲಿನಲ್ಲಿ ನಿಲ್ಲಿರಿ/ನಿಲ್ಲಿ/ನಿಲ್ಲಲಿ/ನಿಲ್ಲಬೇಕು **ಸೂಚನೆ:-**ಅಷ್ಟೇ ಅಲ್ಲದೆ ಇವುಗಳನ್ನು ಹೊರತು ಪಡಿಸಿ ವಿದ್ಯಾರ್ಥಿಗಳು ಸೂಕ್ತ ಉತ್ತರ ಬರೆದರೂ ಅಂಕವನ್ನು ನೀಡಬೇಕು.	**1**	**1**
	II	ಕಾವೇರಿ ನಾಲೆ ಇಲ್ಲಿಗೆ ಬಂದರೆ, ನಮ್ಮ ಬಡತನ ನೀಗೀತು/ ನೀಗೀತೇ/ ನೀಗಬಹುದು/ನೀಗಬಹುದೇ **ಸೂಚನೆ:-**ಸಂಶಯ, ಊಹೆ ಅರ್ಥಬರುವಂತಹ ವಾಕ್ಯಗಳನ್ನು ಬರೆದಿದ್ದರೆ ಅಂಕ ನೀಡಬೇಕು.	**1**	**1**

	III	ಈ ಗ್ರಂಥದಲ್ಲಿ ಪಾಕಶಾಸ್ತ್ರದ ವಿಷಯವು ಚೆನ್ನಾಗಿ ಹೇಳಲ್ಪಟ್ಟಿದೆ. **ಸೂಚನೆ:-** / ಹೇಳಲ್ಪಡುವುದು/ಹೇಳಲ್ಪಡುತ್ತದೆ- ಈ ರೀತಿಯ **ಅಲ್ಪಡು** ಎಂಬ ಕರ್ಮಣಿ ಪ್ರತ್ಯಯದ ಕ್ರಿಯಾಪದವನ್ನು ಮಾತ್ರ ಗಮನಿಸಿ ಪೂರ್ಣಾಂಕ ನೀಡಬೇಕು.)	1	1
	IV	ಪ್ರಾಮಾಣಿಕತೆ, ಆತ್ಮವಿಶ್ವಾಸ, ಶ್ರದ್ಧೆ, ದೃಢನಿರ್ಧಾರ, ಆಸಕ್ತಿಯಿಂದ ನಾವು ಮಾಡುವ ಕೆಲಸದಲ್ಲಿ ಗುರಿ ಸಾಧಿಸಬಹುದು. **ಸೂಚನೆ:**-ಮಕ್ಕಳು ಈ ರೀತಿಯ ಅರ್ಥ ಬರುವ ಹಾಗೆ ಬರೆದಿದ್ದರೆ ಪೂರ್ಣಾಂಕ ನೀಡುವುದು. **ಅಥವಾ** ನಮ್ಮ ಮಾತು ಇತರರಿಗೆ ನೋವುಂಟು ಮಾಡದಂತೆ ಹಿತ-ಮಿತ-ಮೃದುವಾಗಿರಬೇಕು. ಇಲ್ಲದಿದ್ದರೆ ಅದು ಅನಾಹುತಕ್ಕೂ ಕಾರಣವಾಗುತ್ತದೆ. **ಸೂಚನೆ :-** ಮಕ್ಕಳು ಈ ರೀತಿಯ ಅರ್ಥ ಬರುವ ಹಾಗೆ ಬರೆದಿದ್ದರೆ ಪೂರ್ಣಾಂಕ ನೀಡುವುದು.	1	1
	V	ಅಧಿಕಾರ, ಅಂತಸ್ತು, ಸಂಪತ್ತು ಬಂದಾಗ ದೊಡ್ಡಸ್ತಿಕೆಯಿಂದ ಮೆರೆಯಬಾರದು. **ಸೂಚನೆ:**-ಮಕ್ಕಳು ಈ ರೀತಿಯ ಅರ್ಥ ಬರುವ ಹಾಗೆ ಬರೆದಿದ್ದರೆ ಪೂರ್ಣಾಂಕ ನೀಡುವುದು.	1	1
ಬಹುಆಯ್ಕೆ ಪ್ರಶ್ನೆಗಳು				
7	I	(b) ಸರ್ವೋದಯ	1	1
	II	(d) ಪೆರಿಯಾರ್	1	1
	III	(c) ಜನರಲ್ ಡಯರ್	1	1
	IV	(b) 1, 2 ಮತ್ತು 4	1	1
	V	(a) ಮೂರು	1	1

PART -B SECTION – C ಬರೆವಣಿಗೆ ಕೌಶಲ				
8		**ವಿನಂತಿ ಪತ್ರ/ಮನವಿಪತ್ರ** ● ಇಂದ - ● ಇವರಿಗೆ - ● ಸ್ವಳ- ದಿನಾಂಕ ● ಮಾನ್ಯರೇ, ವಿಷಯ ● ಪತ್ರದ ಒಡಲು - ● ತಮ್ಮ ವಿಶ್ವಾಸಿ -	½ ½ ½ ½ 1½ ½	4
		ಹುದ್ದೆಗೆ ಅರ್ಜಿ ● ಇಂದ - ● ಇವರಿಗೆ - ● ಸ್ವಳ- ದಿನಾಂಕ ● ಮಾನ್ಯರೇ, ವಿಷಯ, ಉಲ್ಲೇಖ- ● ಸ್ವ-ವಿವರ - ● ತಮ್ಮ ವಿಶ್ವಾಸಿ/ಅಭ್ಯರ್ಥಿಯ ಸಹಿ -	½ ½ ½ ½ 1½ ½	4
9		**ವರದಿ** ● ಶೀರ್ಷಿಕೆ – ● ಸ್ವಳ - ● ದಿನಾಂಕ - ● ವರದಿಯ ಒಡಲು - ● ವರದಿಗಾರರ ರುಜು -	½ ½ ½ 2 ½	4
10		**ಪ್ರಬಂಧ** ● ಪೀಠಿಕೆ -- ● ವಿಷಯ ವಿವರಣೆ, ಭಾಷಾಶೈಲಿ - ● ಉಪಸಂಹಾರ/ಮುಕ್ತಾಯ -	1 2 1	4

SECTION – D

ಪಠ್ಯಗಳ ಅಧ್ಯಯನ

ಎರಡು ವಾಕ್ಯಗಳ ಉತ್ತರಗಳು

11	I	ರಾಮನು **"ಎಲೈ ಗಿರಿ ವನವೇ ನಾನು ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ ಹೇಳಿರಿ ನನ್ನ ಪ್ರೀತಿಯ ರಾಣಿ ಸೀತೆಯು ದೊರೆಯುವಳೇ?** ದೊರೆಯುವುದಿಲ್ಲವೋ? **ಅವಳು ಇರುವ ನೆಲೆ ಯಾರಾದರೂ ತಿಳಿದಿರುವಿರಾ. ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ."** ಎಂದು ಗಿರಿವನಗಳನ್ನು ಪ್ರಾರ್ಥಿಸುತ್ತಾನೆ.	1 1	2
	II	ಲಾವಣಿಗಳು **ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ವೀರತನ ಹಾಗೂ ಸಾಹಸವನ್ನು** ವರ್ಣಿಸುವುದರಿಂದ ಲಾವಣಿಗಳನ್ನು ವೀರ ಗೀತೆಗಳು ಎನ್ನಲಾಗಿದೆ.	1 1	2
	III	ನಿಮ್ಮ ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆಯೇ ನಿಂತಿದೆ. ಎಂದು ಭಾವಿಸಿ **ಕಾರ್ಯೋನ್ಮುಖರಾಗಿ. ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ** ನೀವು ಒಂದು **ಮಹಾ ಆದರ್ಶಕ್ಕಾಗಿ ದುಡಿದು ಮಡಿದಾಗ** ಬಾಳಿನಲ್ಲಿ ತೃಪ್ತಿಯು ಇರುತ್ತದೆ ಎಂಬ ಅಭಿಪ್ರಾಯ.	1 1	2
	IV	**ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಬ್ಬನೇ ದೇವರು** ಎಂಬುದು ನಾರಾಯಣ ಗುರು ಅವರ ಪ್ರಮುಖ ಆಶಯವಾಗಿತ್ತು.	1 1	2

5-6 ವಾಕ್ಯಗಳ ಉತ್ತರಗಳು

12	I	"ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ **ಸ್ವೇಚ್ಛೆಯಿಂದ ಇರುವವರಲ್ಲ**. ಮತ್ತೆ **ವ್ಯಾಪಾರಕ್ಕೆ ಹೋಗಬೇಕಾಗುತ್ತದೆ**. ಆ ಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, **ಉಳಿದ ಹೊನ್ನೆಲ್ಲವನ್ನು ಈ ಮರದ ಕೆಳಗೆ ಹೂತಿಟ್ಟು** ಬಿಡೋಣ" ಎಂದು ಸಲಹೆಯಿತ್ತನು.	1 1 1	3

	II	ವಿದ್ಯಾರ್ಥಿಗಳ **ಸ್ವಂತಿಕೆ, ಸೃಜನಶೀಲತೆ** ಮತ್ತು **ಕವಿಯ ಆಶಯದ** ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಕಗಳನ್ನು ನೀಡಬೇಕು.	1 1 1	3
		ಸಂದರ್ಭ ಹಾಗೂ ಸ್ವಾರಸ್ಯ		
13	I	**ಆಯ್ಕೆ:**-ಈ ವಾಕ್ಯವನ್ನು **ಶ್ರೀ. ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **"ಭಾಗ್ಯಶಿಲ್ಪಿಗಳು"** (**ಸರ್.ಎಂ. ವಿಶ್ವೇಶ್ವರಯ್ಯ**) ಎಂಬ ಪಾಠಭಾಗದಿಂದ ಆರಿಸಲಾಗಿದೆ.	½ + ½	
		ಸಂದರ್ಭ:- ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಭಾರತದ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರಲಾಲ್ ನೆಹರೂರವರು ಈ ಮಾತನ್ನು ಹೇಳಿದರು. "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ಎಂದು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ವ್ಯಕ್ತಪಡಿಸಿದ್ದಾರೆ.	½ 1 ½	3
		ಸ್ವಾರಸ್ಯ:-"ನುಡಿಗಿಂತ ನಡೆ ಲೇಸು"ಎಂಬ ಮಾತು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.		
		ಅಥವಾ		
		ಆಯ್ಕೆ: ಈ ವಾಕ್ಯವನ್ನು **ಕೇಶವ ಬಲಿರಾಮ ಹೆಡಗೇವಾರರು** ರಚಿಸಿರುವ '**ನಿಜವಾದ ಆದರ್ಶ ಪುರುಷ ಯಾರಾಗಬೇಕು?** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.	½ + ½ ½	
		ಸಂದರ್ಭ: ಒಮ್ಮೆ ಲೇಖಕರ ಪರಿಚಿತ ಮಹನೀಯರೊಬ್ಬರು ಅವರಲ್ಲಿಗೆ ಬಂದರು. ಅವರು ದಿನನಿತ್ಯ ಸ್ನಾನ, ಸಂಧ್ಯಾವಂದನೆಗಳಾದ ನಂತರ ಅಧ್ಯಾತ್ಮ ರಾಮಾಯಣದ ಒಂದು ಅಧ್ಯಾಯವನ್ನು	1	3

		ಓದುತ್ತಿದ್ದರು. ಒಂದು ದಿನ ಲೇಖಕರು ಊಟದ ಸಮಯದಲ್ಲಿ, "ನೀವು ಈಗಾಗಲೇ ಪಠಿಸಿರುವ ಅಧ್ಯಾಯಗಳನ್ನು ಆಚರಣೆಯಲ್ಲಿ ತರಲು ಯತ್ನಿಸಿರಬೇಕು ಅಲ್ಲವೆ?" ಎಂದು ಅವರನ್ನು ಕೇಳಿದರು. ಲೇಖಕರು ಅಷ್ಟು ಕೇಳಿದ್ದೇ ತಡ ಅವರು ಕೆರಳಿ ಕೆಂಡವಾದರು. "ನೀವು ಶ್ರೀರಾಮಚಂದ್ರನ, ಆ ಪ್ರತ್ಯಕ್ಷ ಭಗವಂತನನ್ನು ಅಪಹಾಸ್ಯ ಮಾಡುವಿರಾ? ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ವ್ಯಕ್ತವಾಗಿದೆ. **ಸ್ವಾರಸ್ಯ:** ರಾಮಾಯಣವನ್ನು ಗ್ರಂಥಪಠಣ ಮಾಡುವುದು ಗುಣಗ್ರಹಣಕ್ಕಾಗಿ ಅಲ್ಲ, ಪುಣ್ಯಸಂಚಯ ಹಾಗೂ ಮೋಕ್ಷಪ್ರಾಪ್ತಿಗಾಗಿ ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ.	½	
	II	**ಆಯ್ಕೆ:-**ಈ ಸಾಲನ್ನು ಕುಮಾರವ್ಯಾಸ ರಚಿತ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. **ಸಂದರ್ಭ**: – ಕರ್ಣನು ಕೃಷ್ಣನಿಗೆ ಹೀಗೆ ಹೇಳುತ್ತಾನೆ. ಎಲೇ ಮಾಧವನೇ, ಕೌರವರು ಮತ್ತು ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳಲು ನನಗೆ ಮನಸ್ಸಿಲ್ಲ. ಕೌರವನೇ ನನಗೆ ದಾತಾರ. ಆತನ ಹಗೆಯೆ ನನಗೆ ಹಗೆ. ಆತನ ಹೊಗಳಿಕೆಯೇ ನನಗೆ ಹೊಗಳಿಕೆ. ಆತನಿಗಾಗಿ ನಾನು ರಣರಂಗದಲ್ಲಿ ಪಾಂಡವರ ಶಿರವನರಿದು ಕೌರವನ ಋಣವನ್ನು ತೀರಿಸುತ್ತೇನೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. **ಸ್ವಾರಸ್ಯ**: – ಮಹಾಭಾರತ ಯುದ್ಧದ ಭೀಕರತೆಯನ್ನು ತಿಳಿಸುವುದೇ ಈ ಮಾತಿನ ಸ್ವಾರಸ್ಯವಾಗಿದೆ. **ಅಥವಾ**	½ + ½ ½ **1** ½ ½ + ½ ½	**3**

		ಆಯ್ಕೆ: – ಈ ವಾಕ್ಯವನ್ನು ಕವಿ **ಲಕ್ಷ್ಮೀಶನು** ರಚಿಸಿರುವ **ವೀರಲವ** 'ಎಂಬ ಪದ್ಯಭಾಗದಿಂದ ಆರಿಸಲಾಗಿದೆ. **ಸಂದರ್ಭ:** – ವೀರಲವನು ತನ್ನ ಉತ್ತರೀಯದಿಂದ ರಾಮನ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿದನು. ಆಗ ಭಯದಿಂದ ನಡುಗುತ್ತಾ, ಮುನಿಸುತರು ವೀರಲವನಿಗೆ ಅರಸುಗಳ ಕುದುರೆಯನ್ನು ಕಟ್ಟುವುದು ಬೇಡ. ಕುದುರೆಯನ್ನು ಬಿಡು, ಇಲ್ಲದಿದ್ದರೆ ಅವರು ನಮ್ಮನ್ನು ಬಡಿಯುವರು ಎಂದು ಹೇಳುತ್ತಾರೆ. **ಸ್ವಾರಸ್ಯ:** ಇಲ್ಲಿ ವೀರಲವನ ಪರಾಕ್ರಮ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.	1 ½	3
		8-10 ವಾಕ್ಯಗಳ ಉತ್ತರಗಳು		
14	I	ಶಬರಿ ಬೇಡರಾಜನ ಮಗಳು. ಆಕೆ ಮತಂಗಾಶ್ರಮದಲ್ಲಿ ವಾಸವಾಗಿದ್ದಳು. **ಮತಂಗ ಋಷಿಗಳು ಪ್ರತಿನಿತ್ಯ ದಶರಥ ಪುತ್ರನಾದ ಶ್ರೀರಾಮನ ಗುಣ ಸ್ವಭಾವಗಳನ್ನು ಹಾಡಿ ಹೊಗಳುತ್ತಿದ್ದರು**. ಇದರಿಂದ **ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂಬ ಹಂಬಲದಲ್ಲಿ ಇದ್ದಳು**. **ಮತಂಗ ಋಷಿಯು ಶಬರಿಯ ಮನದ ಹಂಬಲವನ್ನು ತಿಳಿದು, ಇಲ್ಲಿಗೆ ಶ್ರೀರಾಮ ಬಂದೇ ಬರುತ್ತಾನೆ**, ಅವನ **ದರ್ಶನದಿಂದ ನಿನಗೆ ಮುಕ್ತಿ ಸಿಗುತ್ತದೆ** ಎಂದು ಹೇಳಿದ್ದರು. ಅದರಂತೆ ಶಬರಿ ಮತಂಗ ಋಷಿಗಳ ಮಾತನ್ನು ನಂಬಿ ಶ್ರೀರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು. **ಮತಂಗ ಋಷಿಗಳು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾಯುತ್ತಿದ್ದಳು.** ಶ್ರೀರಾಮನಿಗಾಗಿ ದಿನವೂ ಹೂ-ಹಣ್ಣುಹಂಪಲುಗಳನ್ನು ತಂದಿಟ್ಟುಕೊಂಡು **ರಾಮ ಇಂದು ಬರುವನೋ, ನಾಳೆ ಬರುವುನೋ ಎಂಬ ಚಿಂತೆಯಲ್ಲಿರುತ್ತಾಳೆ**. ಮತಂಗರ ಮಾತಿನಂತೆ ಒಂದು ದಿನ ರಾಮಲಕ್ಷ್ಮಣರು ಮತಂಗಾಶ್ರಮಕ್ಕೆ ಬರುತ್ತಾರೆ. **ಶಬರಿ ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ.** ತನ್ನ ಮನದ	½ ½ ½ ½ ½ ½ ½ ½	4

		ಬಯಕೆಯಂತೆ ಹೂಮಾಲೆಯನ್ನು ಹಾಕಿ, **ಹಣ್ಣು-ಹಂಪಲುಗಳನ್ನು ಕೊಟ್ಟು ತನ್ನ ಮನದ ಬಯಕೆಯನ್ನು ಈಡೇರಿಸಿಕೊಂಡು ಧನ್ಯಳಾಗುತ್ತಾಳೆ.** ಮುಕ್ತಿಯನ್ನು ಪಡೆಯುತ್ತಾಳೆ. ಹೀಗೆ ತಾಳುವಿಕೆಗಿಂತ ತಪವಿಲ್ಲ ಎನ್ನುವ ಹಾಗೆ ಶಬರಿ ಶ್ರೀರಾಮನಿಗೋಸ್ಕರ ಕಾದು ಕೆಡಲಿಲ್ಲ. ಆದ್ದರಿಂದ ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ. **ಅಥವಾ** ವೃಕ್ಷಸಾಕ್ಷಿ ಪಾಠದಲ್ಲಿ ನಾನು ಮೆಚ್ಚುವ **ಪಾತ್ರವೆಂದರೆ ಧರ್ಮಬುದ್ಧಿ**. ಏಕೆಂದರೆ ಧರ್ಮಬುದ್ಧಿ ಧರ್ಮಮಾರ್ಗದಲ್ಲಿ ನಡೆಯುವ ವ್ಯಕ್ತಿ. ಅವನ ಹೆಸರಿಗೆ ತಕ್ಕಂತೆ ಗುಣವನ್ನು ಹೊಂದಿದ್ದು, ಧರ್ಮಬುದ್ಧಿಯ ಪಾತ್ರವು **ಸಹನಶೀಲತೆ, ಸುಸಂಸ್ಕೃತ ವ್ಯಕ್ತಿತ್ವವನ್ನು** ನಿರೂಪಿಸುತ್ತದೆ. ತನ್ನ ಸ್ನೇಹಿತನ ಮಾತನ್ನು ನಂಬಿದವನು. ಆತನದು ತಾಳ್ಮೆ ಸ್ವಭಾವ. ಏಕೆಂದರೆ **ದುಷ್ಟಬುದ್ಧಿಯು ಈತನ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿದರೂ ಭಯಪಡದೆ** ಶಾಂತ ರೀತಿಯಲ್ಲಿ ವರ್ತಿಸಿದನು. ಸೂರ್ಯೋದಯವಾದೊಡನೆ **ಧರ್ಮಬುದ್ಧಿಯು ದೇವರು, ಗುರುಗಳು, ವೇದಾಧ್ಯಯನ ನಿರತರಾದವರನ್ನು ಪೂಜೆ ಮಾಡುತ್ತ ಬೆಳಗಿನ ಹೊತ್ತನ್ನು ಕಳೆಯುತ್ತಿದ್ದನು** ಎಂಬುದನ್ನು ನೋಡಿದರೆ ಆತನೊಬ್ಬ ದೈವಭಕ್ತನಾಗಿದ್ದನು ಎಂದು ಹೇಳಬಹುದು. ಅಲ್ಲದೇ ಮರದ ಪೊಟರೆಯೊಳಗಿದ್ದ ಪ್ರೇಮಮತಿ, ಧರ್ಮಬುದ್ಧಿಯೇ ಹೊನ್ನನ್ನು ಕದ್ದವನು ಎಂದು ಹೇಳಿದಾಗಲೂ **ವಿಚಲಿತನಾಗದೆ ದೇವರು ಮಾತನಾಡಿದ್ದರೆ ಸತ್ಯವನ್ನು ಹೇಳುತ್ತಿತ್ತು**, ಇದರಲ್ಲಿ ಏನೋ ಮೋಸ ಅಡಗಿದೆ ಎಂದು ತನ್ನ ಬುದ್ಧಿವಂತಿಕೆಯಿಂದ ಮರದೊಳಗೆಮನುಷ್ಯ**ಸಂಚಾರ ವಾಗಿರುವುದನ್ನು ಗ್ರಹಿಸಿಕೊಂಡು** ಮರದ ಪೊಟರೆಯೊಳಗೆ ಅಡಗಿದ್ದ **ದುಷ್ಟಬುದ್ಧಿಯ ತಂದೆ ಪ್ರೇಮಮತಿಯನ್ನು ಹೊರಗೆ ಬರುವಂತೆ ಮಾಡಿ ಸತ್ಯವನ್ನು ತೋರಿಸುತ್ತಾನೆ**. ಆದ್ದರಿಂದ ಆತ	½ ½ ½ ½ ½ ½ ½ ½	4

		ಸತ್ಯವಂತನಾಗಿದ್ದು. ದುಷ್ಟಬುದ್ಧಿಯ ತಂತ್ರ ಆತನಿಗೆ **ತಿರುಗುಬಾಣವಾಗುವಂತೆ ಮಾಡಿ ಪಾಪಬುದ್ಧಿಯವನಾದ ದುಷ್ಟಬುದ್ಧಿಗೆ ಸರಿಯಾದ ಪಾಠವನ್ನು ಕಲಿಸಿದನು**. ಆದ್ದರಿಂದ ನನಗೆ ಧರ್ಮಬುದ್ಧಿಯ ಪಾತ್ರ ಮೆಚ್ಚಿಗೆಯಾಯಿತು.		
		8-10 ವಾಕ್ಯಗಳ ಉತ್ತರಗಳು		
15	I	ಜೀವನದಲ್ಲಿ **ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು** ಹೊಂದಿರಬೇಕು. ಯಾವುದೇ ರೀತಿಯ **ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂ**ಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಸುತ್ತಮುತ್ತಲು ಕವಿದಿರುವ ಅಜ್ಞಾನವೆಂಬ **ಕತ್ತಲೆಯನ್ನು ಹೋಗಲಾಡಿಸಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು**. ಜೀವನವೆಂಬ ಹಡಗನ್ನು ಎಚ್ಚರದಿಂದ ನಡೆಸಬೇಕು. ಮಲಿನಗೊಂಡ ನದಿಜಲವನ್ನು ಸ್ವಚ್ಛಗೊಳಿಸಲು **ಮುಂಗಾರಿನ ಮಳೆಯಾಗಿ ಬರಡಾಗಿರುವ ಕಾಡುಮೇಡುಗಳನ್ನು ವಸಂತವಾಗಿಸಬೇಕು. ಶೋಷಣೆಗೊಳಗಾದ ಜನರನ್ನು ಮೇಲೆಬ್ಬಿಸುವ ಭರವಸೆಯನ್ನು ನೀಡಬೇಕು. ಜಾತಿ, ಮತಗಳ ಭೇದಭಾವಗಳನ್ನು ಹೋಗಲಾಡಿಸಿ ಐಕ್ಯತೆಯನ್ನು ಬೆಳೆಸಬೇಕು. ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ** ಹಣತೆಯನ್ನು ಹಚ್ಚಿದಾಗ ಕತ್ತಲೆಯು ದೂರವಾಗುತ್ತದೆ ಎಂಬ ದೃಢಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ. **ಅಥವಾ** ದುರ್ಯೋಧನನ ಗೆಳೆಯನಾಗಿ **ಕರ್ಣನು ಕಾಪಾಡಿದ ಒಡೆಯನಿಗೆ ಹಗೆವರ ಶಿರವನರಿದು ಒಪ್ಪಿಸುವೆನು** ಎಂಬ ಉತ್ಸಾಹದಲ್ಲಿದ್ದನು. ದುರ್ಯೋಧನನೇ **ನನಗೆ ಒಡೆಯ, ಆತನ ಹಗೆಗಳುನನಗೂ ಹಗೆಗಳೇ,** ಆತನ ಅಭಿಮಾನ ನನಗೂ ಅಭಿಮಾನ,ದುರ್ಯೋಧನನ	½ ½ ½ ½ ½ ½ ½ ½ ½ ½ ½	4 4

		ಹಾದಿಯನ್ನೇ ನಾನು ಅನುಸರಿಸುತ್ತೇನೆ. **'ಯುದ್ಧಭೂಮಿಯಲ್ಲಿ ನನ್ನ ನಿಜವಾದ ಪರಾಕ್ರಮವನ್ನು ತೋರಿಸುತ್ತೇನೆ.** ತನಗೆ **ಮಾಡಿದಉಪಕಾರವನ್ನು ಯುದ್ಧರಂಗದಲ್ಲಿ** ತೀರಿಸುತ್ತೇನೆ. ಎಂಬ ಮಾತುಗಳು ಕರ್ಣನಿಗೆ ದುರ್ಯೋಧನ ಮೇಲೆ ಎಷ್ಟೊಂದು ಗೆಳೆತನದ ವಿಶ್ವಾಸವಿತ್ತು ಎಂಬುದನ್ನು ತಿಳಿಸುತ್ತದೆ. ಕೃಷ್ಣನು **ಕರ್ಣನ ಜನ್ಮರಹಸ್ಯವನ್ನು** ತಿಳಿಸುತ್ತ ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗನು ನೀನು. ನಿನ್ನ ನಂತರ ಪಾಂಡವರು ಜನಿಸಿದರು. **ಎಂದು ಹೇಳಿದಾಗ ಕರ್ಣನಿಗೆ ದುಃಖವಾಗುತ್ತದೆ.** ಆಗ ಕೃಷ್ಣನನ್ನು ಕುರಿತು ಕರ್ಣ ನಿನ್ನಯ **ವೀರರೈವರ ನೋಯಿಸದೆ** ಸೈನ್ಯಬಲವನ್ನು ಮಾರಿಗೆ ಔತಣವನ್ನಾಗಿ ನೀಡಿ, ಅನ್ನದಾತನ ಋಣವನ್ನು ತೀರಿಸಿ ಪ್ರಾಣವನ್ನು ತ್ಯಜಿಸುತ್ತೇನೆ. **ಇದು ಸೂರ್ಯನ ಮೇಲೆ ಆಣೆ** ಎಂಬ ಕರ್ಣನ ಮಾತುಗಳು ಅವನ ಸೋದರ ಸಂಬಂಧವನ್ನು ತಿಳಿಸುತ್ತದೆ.	½ ½ ½ ½	

****